ಆಕರ್ಷಕ ಮುಖಪುಟ, ವೈವಿಧ್ಯಮಯ ಕತೆ–ಅಂಕಣಗಳು, ವರ್ಣಮಯ ಚಿತ್ರಗಳಿರುವ ಜುಲೈ ತಿಂಗಳ 'ಮಯೂರ' ಇಷ್ಟವಾಯಿತು. ಈ ಬಾರಿಯ 'ರಂಗವಿಹಂಗಮ'ದಲ್ಲಿ ಬಿ.ವಿ. ಕಾರಂತರನ್ನು ಪರಿಚಯಿಸಿದ್ದು ಉತ್ತಮ ಪ್ರಯತ್ನ. ಕನ್ನಡ ರಂಗಭೂಮಿಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ಕಾರಂತರ ನೆನಪು ಸಕಾಲಿಕ.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**

ಈ ಸಂಚಿಕೆಯಲ್ಲಿ ದಂಪತಿ ನಡುವಿನ ವಿರಸವೇ ಹೆಚ್ಚಿನ ಕತೆಗಳ ಮೂಲವಸ್ತುವಾಗಿದೆ. ಪತಿಪತ್ನಿ ವಿದ್ಯಾವಂತರಾಗಿದ್ದರೂ ತಮ್ಮ ಸಂಸಾರದ ವಿರಸವನ್ನು ಸರಿಪಡಿಸಲು ಮೂರನೇ ವ್ಯಕ್ತಿಯನ್ನು ಅವಲಂಬಿಸಬೇಕಾದುದು ಈ ಕಾಲದ ದುರಂತ. ವಿಶಾಖ ಎನ್. ಅವರ 'ರೈಲು ಚಾಲಕರ ಕೇಳದ ಕಥೆ' ನಿಜಕ್ಕೂ ಅಪರೂಪದ ಬರಹ.


**ಶ್ರೀನಾಥ್ ಕೊನೇಟಿ, ಬೆಂಗಳೂರು**

ಬಾನು ಮುಷ್ತಾಕ್ ಅವರ ಲೇಖನ 'ನನ್ನ ಕತೆ ನನ್ನ ಮಗುವಿನ ಹಾಗೆ' (ನನ್ನ ಕಥಾ ಪ್ರಸಂಗ) ತುಂಬ ಹಿಡಿಸಿತು. ಸುಮತೀಂದ್ರ ನಾಡಿಗ ಅವರ 'ಹೆಬ್ಬಾವು', ಕೃಷ್ಣಮೂರ್ತಿ ಚಂದರ್ ಅವರ 'ಟ್ರೈಕೋಟಿಲೋಮೇನಿಯಾ' ಕತೆಗಳು ಕುತೂಹಲ ಹುಟ್ಟಿಸುವಂತಿವೆ.

**ನೀಲಮ್ಮ ಲಿಂಗಸೂರು, ರಾಯಚೂರು**

ಸುಮತೀಂದ್ರ ನಾಡಿಗರ 'ಹೆಬ್ಬಾವು' ಕತೆ ಕುಟುಂಬದ ಒಳಗಿನ ಸೂಕ್ಷ್ಮ ಪದರುಗಳನ್ನು ಕಪ್ಪು–ಬಿಳುಪಿನ ಹೋಲಿಕೆಯೊಂದಿಗೆ ಸೊಗಸಾಗಿ ಹಿಡಿದಿಡುತ್ತದೆ.

**ಎಚ್.ಎಸ್. ಸತ್ಯನಾರಾಯಣರಾವ್, ಅರಕಲವಾಡಿ**




ರೇಣುಕಾ ನಿಡಗುಂದಿ ಅವರ 'ಮೋಡ ಕಟ್ಟೀತು ಹೇಗೆ?' ಕತೆ ಅರ್ಥಪೂರ್ಣ. ಎಂ.ಆರ್. ಮಂದಾರವಲ್ಲಿ ಅವರ 'ನಿನ್ನ ಮೌನದ ತುಂಬ ನಿನ್ನವೇ ಮಾತುಗಳು' ಕತೆ ಕೂಡ ಮನುಷ್ಯ ಸಂಬಂಧಗಳ ನಿಜವಾದ ಅರ್ಥವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದೆ.

**ವಿಶ್ವನಾಥ್ ಎಂ., ಹುಬ್ಬಳ್ಳಿ**

ಛಾಯಾ ಭಟ್ ಅವರ 'ಕಡಲಂತೆ ಈ ಪ್ರೀತಿ' ಕತೆ ಓದಿಸಿಕೊಂಡು ಹೋಯಿತು.

**ಕೊಹಿಮ, ಬಸರಕೋಡು**

'ಕಾಲಚಕ್ರ' ಹಾಗೂ 'ಅಂಗಡಿ' ಕತೆಗಳು ಹಾಗೂ 'ಹಕ್ಕಿಪುಚ್ಛವೆನ್ನುವ ಬೆಚ್ಚಾನೆ ತಾವು' ಪ್ರಬಂಧ ಮನಸೆಳೆದವು.

**ಬಿ.ಆರ್. ಸುರೇಶ್, ಶಿವಮೊಗ್ಗ**

ನಟರಾಜ್ ಹುಳಿಯಾರ್ ಅವರು ಅನುವಾದಿಸಿದ ಅಲೀಫಾ ರಿಫಾತ್ ಅವರ 'ಫೊಬಾಶಿ ಮನೆಯಲ್ಲೊಂದು ಪ್ರಸಂಗ' ಕತೆ ಮನಮುಟ್ಟಿತು. ಓ.ಎಲ್. ನಾಗಭೂಷಣ ಸ್ವಾಮಿ ಅವರು ಅನುವಾದಿಸಿದ ಒರ್ಹಾನ್ ಪಾಮುಕ್ ಲೇಖನ 'ನಮ್ಮಪ್ಪನ ಸೂಟ್‌ಕೇಸು' ಬರಹಗಾರನೊಬ್ಬನ ಅತ್ಯಂತ ಪ್ರಾಮಾಣಿಕ, ಆಪ್ತ ಚಿತ್ರಣವನ್ನು ಕೊಟ್ಟಿದೆ.

**ಎಂ.ಎಸ್. ರಮೇಶ್, ಪುತ್ತೂರು**